ಕಾಂಗಾರಿ ಹೆಸರು.	ಮೊಬಲಗು.
ಸಾಗರ-ಕೆಳದಿ ರಸ್ತೆ ರಿಪೇರಿ	70 ರೂ.

17. ಬೋರ್ಡಿನವರ ಒಪ್ಪುಗೆಗೆ ವಳಪಟ್ಟ ಪ್ರೆಸಿಡೆಂಟರವರು ಕಾರ್ಟರಿಸ್ಯೆ ಮಾಡಿ ಕಳುಹಿಸಿಕೊಟ್ಟು ಇರುವ ಅಂದಾಜಾ ತಪಶೀಲ್ ಲೀಸ್ಟು ಓದಿ ಇದನ್ನು ಮಂಜೂರು ಮಾಡತಕ್ಕದ್ದೆಂದು ತೀರ್ಮಾನಿಸಲಾಯಿತು.

ಕಾಂಗಾರಿ ಹೆಸರು.	ಮೊಬಲಗು.
ಅನಂತಪುರ-ತೀರ್ಥಹಳ್ಳಿ ಸ್ಪೆಷಲ್ ರಿಪೇರಿ	809 ರೂ.

ಈ ಕೆಳಗೆ ನಮೂದಾಗುವ ದಾಖಲೆಗಳನ್ನು ಓದಿ ಏಲೆ ಇಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

1. ಟೋಲ್‌ಗೇಟಿಗೆ ಸಮೀಪ ಇರತಕ್ಕ ಜಿರಾಯಿತು ಕಸಬುದಾರರು ಅಥವಾ ಇತರರು ತಮ್ಮ ಬಾಬತು ಗಾಡಿಗಳು ಟೋಲ್ ಗೇಟಿನಲ್ಲಿ ಹೋಗಿ ಬರುವ ಸಂದರ್ಭದಲ್ಲಿ ಈ ಬಗ್ಗೆ ಕೊಡುವ ಟೋಲಿನ ಬಗ್ಗೆ ರಾಜಿ ಮಾಡಿಕೊಳ್ಳಬಹುದೆಂತ ಆಗಿರುವ ಗೌರ್ಮೆಂಟ್ ನಂಬರ್ 1369—76 L. B. 81-05-16ನೆ ಪ್ರೊಸೀಡಿಂಗ್ಸ್.

2. ಹೊಸದಾಗಿ ಮೊಳರೂರು ಆಗತಕ್ಕ ಮೆಂಬರುಗಳ ವಿಷಯದಲ್ಲಿ ಜೂಲೈ ಗುರ್ಯೇ ತಾರೀಖಿನಲ್ಲಿಯೇ ಫಾಯಿಷ್ ಆಗಲು ಏರ್ಪಾಡು ಇಡಬೇಕಾಗಿ ಸಾದರಾಗಿರುವ ಗೌರ್ಮೆಂಟ್ ನಂಬರ್ 1255—63—L. B. 90-06-10ನೆ ಪ್ರೊಸೀಡಿಂಗ್ಸ್.

3. ಮ್ಯುನಿಸಿಪಲ್ ಅಥವಾ ಡಿಸ್ಟ್ರಿಕ್ಟ್ ಬೋರ್ಡ್ ಬಾಬತು ಶಿಲ್ಕು ಮೊಬಲಗು ಏನು ಇಲ್ಲದೆ ಇದ್ದ ಇಂಥಾ ಮೊಬಲಗು ಬಂದು ತಿಂಗಳಿಗೆ ಮೇಲ್ಪಟ್ಟು ಛರ್ತಿ ಆಗದೆ ಬಾಕೀಲಿ ಬರುವ ಪಕ್ಷಕ್ಕೆ 1908—09ನೆ ಸಾಲ್ ಪುರುವಿನಿಂದ ಶೇಕಡಾ ಸಾಲೀಯಾನ 4 ರೂಪಾಯಿ ಪ್ರಕಾರ ಬಡ್ಡಿ ದಾಖಲ್ಮಾಡುವದಾಗಿ ಸಾದರಾಗಿರುವ ಗೌರ್ಮೆಂಟ್ ನಂಬರ್ 1000-9—7-8-07ನೆ ಪ್ರೊಸೀಡಿಂಗ್ಸ್.

4. ಅಮೃತಪುಹಲ್ ಬೀಜದ ಹೋರಿಗಳ ಸಪ್ಲೈ ವಿಷಯದಲ್ಲಿ ಗೌರ್ಮೆಂಟಿನಿಂದ ಸಾದರಾಗಿರುವ ನಂಬರು 2311—9—L. B. 255—06-2ನೆ ಪ್ರೊಸೀಡಿಂಗ್ಸ್.

5. ಎಡತೊರೆ ತಾಲ್ಲೂಕು ಚುಂಚನಕಟ್ಟೆಯಲ್ಲಿ ನಡೆಯುವ ದನಗಳ ಪ್ರದರ್ಶನಕಾಲದಲ್ಲಿ ಕೊಡತಕ್ಕ ಬಹುಮಾನದ ಮೊಬಲಗು 200 ರೂಪಾಯಿಗಳಿಗೆ ಹೆಚ್ಚಿಸುವದನ್ನು ಮಂಜೂರು ಮಾಡಿರುವದಾಗಿ ಗೌರ್ಮೆಂಟ್ ನಂಬರ್ 585-95ನೆ ಪ್ರೊಸೀಡಿಂಗ್ಸ್.

ಬರುವ ಮೀಟಿಂಗ್ ತಾರೀಖು 9—12—07ರಲ್ಲಿ ನಡಿಯತಕ್ಕದ್ದೆಂದು ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟ್.

ನೋಟಿಸ್.

ತಾರೀಖು ನೆ ನವಂಬರ್ 1907

ಚಿತ್ರದುರ್ಗದ ಡಿಸ್ಟ್ರಿಕ್ಟ್ ಜಳಕೆರೆ ತಾಲ್ಲೂಕು ಮಿರಾಸಾಬಿಹಳ್ಳಿ ಬಿ. ಹೊಸದಾಗಿ ಕಟ್ಟು ಇರುವ ರಾಂತಲಾವಿಕೆರೆ ಅಚ್ಚುಕಟ್ಟಿಗೆ ಕೇರಿ ಇರುವ ಜಮೀನುಗಳ ಹಿಡುವಳಿ ಹಕ್ಕನ್ನು ವಿಸಿರಾಸಾಬಿಹಳ್ಳಿ ಬಿ. ಸ್ಯ 1908ನೆ ಇಸವಿ ಜನವರಿ ತಾರೀಖು 6ನೆ ಸೋಮವಾರದ ದಿನ ಮತ್ತು ಮರು ದಿವಸಗಳಲ್ಲಿ ಬಹಿರಂಗವಾಗಿ ಹರಾಜು ಮಾಡಿಸುತ್ತೆ ಎಂಬುದಾಗಿ ಈ ಮೂಲಕ ನೋಟೀಸನ್ನು ಕೊಟ್ಟಿರುತ್ತೆ.

ಜಾಸ್ತಿ ತಪಶೀಲುಗಳನ್ನು ಸ್ಯ 1907ನೆ ಮರ್ಕುಂ ನವಂಬರು ತಾರೀಖು 28ನೆ ಗೆಜೆಟ್ಟಿನ IIನೆ ಭಾಗದ 554—555—556ನೆ ಪಾನುಗಳನ್ನು ನೋಡಿಕೊಳ್ಳಬೇಕು.

ತಾರೀಖು 4ನೆ ಡಿಸೆಂಬರು 1907.

ಸ್ಯ 1907ನೆ ಇಸವಿ ನವಂಬರು 28ನೆ ತಾರೀಖಿನ ಮೈಸೂರು ಕನ್ನಡ ಗೆಜೆಟ್ಟಿನ 2ನೆ ಭಾಗದ 556ನೆ ಪುಟದಲ್ಲಿ ಛಾಯಿಷ್ ಆಗಿರುವ ತಾರೀಖು 19—11—1907ನೆ ಮರ್ಕುಂಮಿನ ಹರಾಜು ಷರತ್ತು 6ನೆ ಪ್ಯಾರಾದಲ್ಲಿ "ಶೇಕಡಾ 25 ನ್ನು" ಎಂಬ ಶಬ್ದಗಳ ತರುವಾಯ ಮತ್ತು 8ನೆ ಪ್ಯಾರಾದಲ್ಲಿ "ಪೂರಾ ಮೊಬಲಗನ್ನು" ಎಂಬ ಶಬ್ದದ ತರುವಾಯ "ಮತ್ತು ರೂಪಾಯಿ ಬಂದರೆ ಬಂದಾಣೆಯಂತೆ ಆಗುವ ಲೋಕಲ್ ಸೆಸ್ಸನ್ನು" ಎಂಬ ಶಬ್ದಗಳನ್ನು ಶೇರಿಸಿಕೊಳ್ಳಬೇಕು.

ಎಂ. ಚಂಗ್ಯಪ್ಪಗೌಡ,
ಡೆಪ್ಯುಟಿ ಕಮಿಷನರ್.

ಬೆಂಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸ್ಯ 1907—08ನೆ ಇಸವಿ ಮಿಸ್ಸಿ ಅರ್ಜೀ ನಂಬರು 467.

ಬೆಂಗಳೂರು ಗುಡುಮೈಯ್ಯನಪ್ಯಾಟೇಲಿದ್ದು ಮೃತಪಟ್ಟ ಪೆರ್ಪ. ಅಮಲ್‌ದಾರ್ ವೆಂಕಟರಾವ್ ಸಿಂಧೆಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಜೋತೋಜಿರಾವ್, 2ನೆ ಬಾಯಿಬಾಪಿರಾವ್, 3ನೆ ವಾಸುದೇವರಾವ್, 4ನೆ ವಿಶ್ವನಾಥರಾವ್, ಮೃತಪಟ್ಟ ವೆಂಕಟರಾವ್ ಸಿಂಧೆ ಯವರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ಮೃತಪಟ್ಟ ವೆಂಕಟರಾವ್ ಸಿಂಧೆ ಯವರ ಜಿಂದಗಿ ಖಚ್ಚಾಗಿ ಖರತಕ್ಕ ರೂಪಾಯಿ 4,713—11—6 ನಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ ಪ್ರಕಾರ ಸರ್ಟಿಫಿಕೇಟ್ ಖಚ್ಚೆ ಈ ಕೋರ್ಟಿಗೆ ಖಾಯಿಷ್ ಮಾಡುತ್ತಾನೆ.